2226 (1917) ಶ್ರೀ ಸುನೀಲ್ ಕುಮಾರ್ (ಕಾರ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂಮಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು ಯಾವಾಗ, ಇದರ ಉದ್ದೇಶಗಳೇನು; ಹಾಗೂ ಸಾಧಕ–ಬಾಧಕಗಳೇನು; (ವಿವರ ನೀಡುವುದು);

ಆ) ಇದಕ್ಕೆ ವ್ಯತಿರಿಕ್ತವಾಗಿ ಗ್ರಾಮಗಳ ಜಮೀನು ಖಾತಾ ವರ್ಗಾವಣೆ ಮತ್ತು ಭಾಗಶಃ ಜಮೀನುಗಳ ಸರ್ವೆ ಕಾರ್ಯವನ್ನು ಯಾರಿಗೆ ವಹಿಸಲಾಗುತ್ತದೆ;

ಇ) ಈ ಸರ್ವೆ ಸ್ಕೆಚ್ ಕಡ್ಡಾಯಗೊಳಿಸಲು ಕಾರಣಗಳೇನು; ಇದನ್ನು ಪಡೆಯುವಲ್ಲಿ ಆಗುತ್ತಿರುವ ಅನಗತ್ಯ ವಿಳಂಬ, ಶೋಷಣೆ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ;

ಈ) ತಿಳಿದಿದ್ದಲ್ಲಿ, ಈ ಕಾರ್ಯಕ್ಕಾಗಿ ರೈತರ ಖಾಸಗಿ ಭೂ ಮಾಪಕರನ್ನು ಆಶ್ರಯಿಸುವಂತಾಗಿರುವುದು ನಿಜವೆ;

ಉ) ಹಾಗಿದ್ದಲ್ಲಿ, ಖಾಸಗಿ ಭೂಮಾಪಕರು ಹೆಚ್ಚು ಹಣ ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಭೂಮಿ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಯಿತು. ಎಲ್ಲಾ 177 ತಾಲ್ಲೂಕುಗಳಲ್ಲಿ ಯೋಜನೆಯು ಮಾರ್ಚ್ 2002 ರಲ್ಲಿ ಕಾರ್ಯರೂಪಕ್ಕೆ ತರಲಾಯಿತು.

ಈ ಯೋಜನೆಯ ಉದ್ದೇಶಗಳು

- ಭೂದಾಖಲೆಗಳ ಆಡಳಿತದಲ್ಲಿ ಪಾರದರ್ಶಕತೆ ತರುವುದು.
- ಭೂದಾಖಲೆಗಳ ಆಡಳಿತದಲ್ಲಿ ಹಸ್ತಕ್ಷೇಪರಹಿತಗೊಳಿಸುವುದು.
- ಸಕಾಲಿಕ ಇಂದೀಕರಣ
- ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಮ್ಯುಟೇಷನ್ ಕಾರ್ಯನಿರ್ವಹಿಸುವ ಮೂಲಕ ಪಕ್ಷಪಾತ ನಿವಾರಣೆ

ಯೋಜನೆಯ ಸಾಧಕಗಳು

- ಹಸ್ತಕ್ಷೇಪ ರಹಿತ ಭೂದಾಖಲೆಗಳು ಸುಲಭದಲ್ಲಿ ಲಭ್ಯ
- ಭೂದಾಖಲೆಗಳ ನಿರ್ವಹಣಾ ಆಡಳಿತದಲ್ಲಿ ಸಮಾನತೆ
- ಆಡಳಿತಗಾರರು/ಯೋಜನಾಧಿಕಾರಿಗಳಿಗೆ ಮಾಹಿತಿಯ ಸಂಪತ್ತು
- ಭೂವಿವಾದಗಳ ಇತ್ಯರ್ಥ ಸುಲಭಗೊಳಿಸುವುದು
- ರೈತರಿಗೆ ತೊಂದರೆ ರಹಿತ ಭೂ ಸಾಲ ದೊರಕಿಸುವುದು

ಯೋಜನೆಯ ಬಾಧಕಗಳು

- ಸದ್ಯದ ಯೋಜನೆಯಲ್ಲಿ ರೈತರು ತಮ್ಮ ಭೂದಾಖಲೆಗಳು ಪಡೆಯಲು ತಾಲ್ಲೂಕು ಕಚೇರಿಗೆ ಭೇಟಿ ನೀಡಬೇಕು. ಇನ್ನು ಕೆಲವೇ ದಿನಗಳಲ್ಲಿ ದಾಖಲೆಗಳು ಗ್ರಾಮ ಕಿಯಾಸ್ಕ್‌ಗಳಲ್ಲಿ ಲಭ್ಯಗೊಳಿಸಲಾಗುವುದು.

ಆ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 128 ಮತ್ತು 131 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 46ರ ತಿದ್ದುಪಡಿಯನ್ವಯ ಮೇರೆಗೆ ಗ್ರಾಮಗಳ ಜಮೀನು ಖಾತಾ ವರ್ಗಾವಣೆ ಮತ್ತು ಭಾಗಶಃ ಜಮೀನುಗಳ ಸರ್ವೆ ಕಾರ್ಯವನ್ನು ಕ್ರಮವಾಗಿ ಕಂದಾಯ ಇಲಾಖೆ ಮತ್ತು ಭೂಮಾಪನ ಇಲಾಖೆಯು ನಿರ್ವಹಿಸುತ್ತಿದೆ.

ಇ) ಬಹುಪಾಲು ಪೋಡಿ ಕಡತಗಳು ನೋಂದಣಿಯ ನಂತರ ಅಳತೆಗೆ ಒಳಪಡುತ್ತಿದ್ದು, ಅಳತೆಯ ಸಮಯದಲ್ಲಿ ವಿಸ್ತೀರ್ಣ ಮುಂದಾವುಗಳ ಬಗ್ಗೆ ವ್ಯತ್ಯಾಸಗಳಾಗಿ ಭೂ ವ್ಯಾಜ್ಯಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದ್ದು, ಇಂತಹ ಸಮಸ್ಯೆಗಳನ್ನು ನಿವಾರಿಸಲು ನೋಂದಣಿ ಮತ್ತು ಖಾತಾ ಮಾಡುವ ಮುನ್ನ ಜಮೀನುಗಳನ್ನು ಅಳತೆ ಮಾಡಿ ನಕ್ಷೆ ಸಲ್ಲಿಸುವುದನ್ನು ಸರ್ಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮ ಸೆಕ್ಷನ್ 128 (4) ಮತ್ತು 131 (ಸಿ) ಗೆ ತಿದ್ದುಪಡಿ ತಂದು ಕಡ್ಡಾಯಗೊಳಿಸಿದೆ.

ಈ ಕಾರ್ಯವನ್ನು ಅನುಷ್ಠಾನಗೊಳಿಸುವಲ್ಲಿ ಅನಗತ್ಯ ವಿಳಂಬ ಶೋಷಣೆ ಆಗದೇ ಇರುವಂತೆ ನೋಡಿಕೊಳ್ಳಲು ಭೂಮಾಪನ ಇಲಾಖೆಯಿಂದ ಅಗತ್ಯ ಕ್ರಮಗಳನ್ನು ಜರುಗಿಸಲಾಗಿದೆ.

ಈ) ಹೌದು.

ಉ) ರೈತರಿಗೆ ಶೋಷಣೆ ತಪ್ಪಿಸುವ ಸಲುವಾಗಿ ಪರವಾನಗಿ ಭೂಮಾಪಕರಿಗೆ ಈಗಾಗಲೇ ಸೂಚನೆಗಳನ್ನು ನೀಡಿದ್ದು, ಸಾರ್ವಜನಿಕರು ಸರ್ವೆ ಕಛೇರಿಗೆ ಅರ್ಜಿ ನೀಡಿ ನಿಗದಿತ ಶುಲ್ಕವನ್ನು ಮಾತ್ರ ಪಾವತಿ ಮಾಡಿ ಒಂದು ವಾರದೊಳಗಾಗಿ ಅಳತೆ ಮೂಲಕ ನಕ್ಷೆ ಪಡೆಯಬಹುದಾಗಿದೆ.

ಕರ್ನಾಟಕ ಭೂಕಂದಾಯ ನಿಯಮಾವಳಿಗಳ ನಿಯಮ 46(ಕೆ) ರಡಿಯಲ್ಲಿ ಪರವಾನಗಿ ಭೂಮಾಪಕರು ನಿಯಮಾನುಸಾರ ಕಾರ್ಯನಿರ್ವಹಿಸದೇ ಇದ್ದಲ್ಲಿ ಅವರ ಪರವಾನಗಿಯನ್ನು ರದ್ದುಪಡಿಸಲು ಅವಕಾಶವಿರುತ್ತದೆ. ಇದರಿಂದಾಗಿ ಪರವಾನಗಿ ಭೂಮಾಪಕರು ಹೆಚ್ಚಿಗೆ ಹಣ ಪಡೆಯುವ ಸಾಧ್ಯತೆಗಳನ್ನು ನಿಯಂತ್ರಿಸಬಹುದಾಗಿದೆ.

2227 (1918) ಶ್ರೀ ಸುನೀಲ್‌ಕುಮಾರ್ (ಕಾರ್ಕಳ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದಿನ ಸರ್ಕಾರ ಕಂಪು ಯೋಜನೆಯನ್ನು ಜಾರಿಗೆ ತಂದಿತ್ತೆ;

ಆ) ಇದರ ಉದ್ದೇಶಗಳೇನು ಮತ್ತು ಯಾವ ಯಾವ ಜಿಲ್ಲೆಯಲ್ಲಿ ಇದನ್ನು ಅನುಷ್ಠಾನಗೊಳಿಸಲಾಗಿತ್ತು;